ಎದುರಿಸಲು ನಿರಾಕರಿಸುವ ಈಗಿನ ಭಯಂಕರ ಪ್ರಪಂಚದ ಕಟು ವಾಸ್ತವತೆಯ ನಟ್ಟನಡುವೆ ನಮ್ಮನ್ನು ನಿಲ್ಲಿಸುತ್ತದೆ.

೩. ಚಂಡಿಯ ಮೂರನೆಯ ಸಂದೇಶ ಸ್ತ್ರೀ ಸಬಲೀಕರಣ. ಈಚಿನ ವರ್ಷಗಳಲ್ಲಿ ಗ್ರಾಮೀಣ ಹಾಗೂ ಆದಿವಾಸಿ ಪ್ರದೇಶಗಳ ಸ್ತ್ರೀಯರಿಗೆ ಹೆಚ್ಚಿನ ಅಧಿಕಾರ ನೀಡುವ ಬಗ್ಗೆ ಮಾತುಗಳು ಕೇಳಿಬರುತ್ತಿವೆ. 'ಚಂಡಿ' ನಮಗೆ ಇಂತಹ ಸ್ತ್ರೀ ಸಬಲೀಕರಣ ಎಷ್ಟು ಗಾಢವಾಗಬಹುದೆಂಬುದನ್ನು ತೋರಿಸುತ್ತದೆ. ಎಲ್ಲ ದೇಶಗಳಲ್ಲಿ, ಎಲ್ಲ ಕಾಲಗಳಲ್ಲಿ, ಚಿಕ್ಕಂದಿನಿಂದಲೂ ತಾನು ಅಬಲೆ, ಅಸಹಾಯಕಳು ಹಾಗೂ ಗಂಡಿನ ಮೇಲೆ ಅವಲಂಬಿತೆ ಎಂದು ನಂಬುವಂತೆ ಹೆಣ್ಣಿಗೆ ಬೋಧಿಸಲಾಗುತ್ತದೆ. ಆದರೆ ಎಲ್ಲಕ್ಕೂ ಗಂಡಿನ ಬೆಂಬಲ ಇಲ್ಲದೆ ಹೆಣ್ಣು ಎಷ್ಟರ ಮಟ್ಟಿನಶಕ್ತಿಯನ್ನು ಹೊಂದಬಹುದು, ಹೇಗೆ ಅವಳು ಸ್ವತಂತ್ರಳಾಗಿ ಕಾರ್ಯನಿರ್ವಹಣೆ ಮಾಡಬಹುದು, ಭೀಕರ ಯುದ್ಧಗಳನ್ನು ಎದುರಿಸಿ ಗೆಲ್ಲಬಹುದು ಎಂಬುದನ್ನು 'ಚಂಡಿ' ತೋರಿಸಿಕೊಡುತ್ತದೆ.

೪. ಕೊನೆಯದಾಗಿ ಚಂಡಿಯು ನಿರೀಕ್ಷೆ, ದೈವೀ ಸಹಾಯದ ಭರವಸೆ, ಒತ್ತಾಸೆಗಳ ಸಂದೇಶವನ್ನು ನೀಡುತ್ತದೆ. ಗ್ರಂಥದಲ್ಲಿ ಭಯಂಕರ ಘಟನೆಗಳ ಸರಣಿಯೇ ಇದ್ದರೂ ಚಂಡಿಯಲ್ಲಿ ನಿರಾಶೆಯ, ಹತಾಶೆಯ ಧ್ವನಿ ಇಲ್ಲವೇ ಇಲ್ಲ. ಕಷ್ಟಗಳು, ತೊಂದರೆಗಳು ಬರಲಿ, ದೊಡ್ಡ ವಿಪತ್ತುಗಳೇ ಸಂಭವಿಸಲಿ, ನಾವು ಭಯಪಡಬೇಕಾಗಿಲ್ಲ. ಏಕೆಂದರೆ ಎಲ್ಲ ಅಪಾಯಗಳಿಂದ ನಮ್ಮನ್ನು ಪಾರುಮಾಡುವ ಅಥವಾ ಅವನ್ನು ಎದುರಿಸುವ ಧೈರ್ಯವನ್ನು ನೀಡುವ ಒಬ್ಬ ದೇವರು ಅಥವಾ ತಾಯಿ ಇದ್ದಾಳೆ. ನವಯುಗದಲ್ಲಿ ಶ್ರೀಶಾರದಾದೇವಿಯಾಗಿ ಅವತಾರವೆತ್ತಿದ ದೇವಿಯು ನಮಗೆ ಈ ಭರವಸೆಯನ್ನು ನೀಡಿರುವಳು: "ನಿಮ್ಮ ಬೆನ್ನ ಹಿಂದೆ ಯಾರೋ ಒಬ್ಬರು ಸದಾ ಇರುವರೆಂಬುದನ್ನು ನೆನಪಿಡಿ... ನಿಮ್ಮ ಹೊರೆಯನ್ನೆಲ್ಲ ನನ್ನ ಮೇಲೆ ಇಟ್ಟು ನಿಶ್ಚಿಂತರಾಗಿ ಇರಿ." *(ಮುಂದುವರಿಯುವುದು)*

## ಮನನ–ಮಾನ್ಯ
### ಧರ್ಮಬೋಧನೆ
**–ಮಧುಪ**

ಕೇವಲ ಧರ್ಮಬೋಧನೆ ಹಸಿದವರ ಹೊಟ್ಟೆಯನ್ನು ತುಂಬಿಸಲಾರದು. ಆದುದರಿಂದ ಹಸಿದವರಿಗಲ್ಲ ವೇದಾಂತ.

ಬಡವರ ದುಡಿಮೆಗೆ ನ್ಯಾಯವಾದ ಪ್ರತಿಫಲವನ್ನು ದೊರಕಿಸುವ, ನೊಂದವರ ಕಣ್ಣೀರನ್ನು ಒರೆಸಿ ಧೈರ್ಯ–ಸಮಾಧಾನವನ್ನು ಕೊಡುವ, ಬಿದ್ದವರ, ಯಾರೂ ದಿಕ್ಕಿಲ್ಲದವರ ಪರವಾಗಿ ನಿಂತು ಸಹಾಯವನ್ನು ಆಶ್ರಯವನ್ನು ಒದಗಿಸುವ, ಧ್ಯೇಯವನ್ನಿಟ್ಟುಕೊಂಡು ಪ್ರೀತಿ–ಸಹಾನುಭೂತಿ–ತ್ಯಾಗ ಭಾವನೆಗಳಿಂದ ಮಾಡುವ ಸೇವೆಯಲ್ಲಿ ದೇವರನ್ನು ಕಾಣಬಹುದು. ಕಷ್ಟದಲ್ಲಿರುವವರ, ದುಃಖಿಗಳ ಸೇವೆಯೇ ದೇವರಿಗೆ ಸಂತೋಷವುಂಟು ಮಾಡುವ ಶ್ರೇಷ್ಠವಾದ ಪೂಜೆ, ಶ್ರೇಷ್ಠವಾದ ಭಗವತ್ಸೇವೆ.

ಜಾತಿ, ಕುಲ, ಮೇಲು, ಕೀಳು ಎಂಬ ಬೇಧಭಾವನೆಗಳನ್ನು ಬಿಟ್ಟು ಎಲ್ಲರನ್ನೂ ಸಮಾನ ಗೌರವದಿಂದ ಕಾಣುವುದನ್ನು ಸತತವಾದ ಪ್ರಯತ್ನಗಳಿಂದ ಅಭ್ಯಾಸ ಮಾಡಬೇಕು.

ಸ್ವಾಮಿ ವಿವೇಕಾನಂದರನ್ನು ಒಬ್ಬ ಪಂಜಾಬಿ ಸದ್ಗೃಹಸ್ಥ ತಮ್ಮ ಮನೆಗೆ ಊಟಕ್ಕೆ ಬರಬೇಕೆಂದು ಪ್ರಾರ್ಥಿಸಿದನಂತೆ. ಆಗ ಅವರು ಹೇಳಿದರಂತೆ, "ಆಗಲಿ. ನಾನೇನೊ ಸಂತೋಷವಾಗಿ ನಿನ್ನ ಆತಿಥ್ಯವನ್ನು ಸ್ವೀಕರಿಸುತ್ತೇನೆ. ಆದರೆ ಒಂದು ನಿಬಂಧನೆಯ ಮೇಲೆ. ಅಸ್ಪೃಶ್ಯರ ಮನೆಯಲ್ಲೂ ನಾನು ಸಂತೋಷವಾಗಿ ಊಟ ಮಾಡಿದ್ದೇನೆ. ಅವರು ಗೌರವಾನ್ವಿತ ಮನುಷ್ಯರೆಂದು ನಾನು ತಿಳಿದಿದ್ದೇನೆ. ನಿನ್ನ ಮನಸ್ಸಿನಲ್ಲಿಯೂ ಇದೇ ಭಾವನೆ ಇದ್ದರೆ, ನಿನಗೆ ಯಾವ ಜಾತೀಯ ಭಾವನೆಗಳೂ ಇಲ್ಲದಿದ್ದರೆ ನಿನ್ನ ಮನೆಗೆ ಬರುತ್ತೇನೆ. ಹಾಗಿಲ್ಲದೆ ಉತ್ತಮ ಕುಲದವನೆಂಬ ಹೆಮ್ಮೆ ನಿನಗಿದ್ದರೆ, ಕ್ಷಮಿಸು ನಾನು ಬರಲಾರೆ."

ಸ್ವಾಮಿಜಿ ದೀನವ್ಯಕ್ತಿ ಆಗಿರಲಿಲ್ಲ. ಮಹಾ ಅಭಿಮಾನಿ. ಮೇಧಾಶಕ್ತಿಯಲ್ಲಿ, ಪ್ರತಿಭೆಯಲ್ಲಿ ತಾವು ಶ್ರೇಷ್ಠರೆಂದು ಅರಿತಿದ್ದರು. ಅಂತಹವರು ದೀನ ದಲಿತರು ನಾರಾಯಣಸ್ವರೂಪರೆಂದು ಕಂಡರು.

ಶ್ರೇಷ್ಠ ವಂಶದಲ್ಲಿ ಹುಟ್ಟಿದ ಬುದ್ಧ, ಬಸವಣ್ಣ, ಗಾಂಧೀಜಿ ಅವರುಗಳೂ ಜಾತಿಹೀನರಲ್ಲೂ ಶ್ರೇಷ್ಠ ಗುಣಗಳನ್ನು ಗುರುತಿಸಿದರು. ಗೌರವಿಸಿದರು, ಸದ್ಗುಣ–ಸದಾಚಾರಗಳಿಂದ ಮನುಷ್ಯ ಶ್ರೇಷ್ಠನಾಗುತ್ತಾನೆಯೇ ವಿನಹ ಹುಟ್ಟಿನಿಂದಲ್ಲ, ವೃತ್ತಿಯಿಂದಲ್ಲ; ಹಣ–ಅಧಿಕಾರ–ಪದವಿಗಳಿಂದ ಅಲ್ಲವೇ ಅಲ್ಲ.

ಪರಮಾತ್ಮನ ದಿವ್ಯಸಂಕಲ್ಪದಿಂದ ಆಳ್ವಾರರ ಮುಖಾರವಿಂದದಿಂದ ಹೊರಬಂದು ನಮಗೆ ಲಭಿಸಿರುವ ದ್ರವಿಡ ವೇದಸಾರವಾದ ನಾಲಾಯಿರ ದಿವ್ಯಪ್ರಬಂಧಗಳ ಪಾರಾಯಣವು ಕನ್ನಡದಲ್ಲಿಯೂ ಈಗ MP3 ಸಿ.ಡಿ.ಗಳಲ್ಲಿ ಉಚಿತವಾಗಿ ಲಭ್ಯವಿದೆ. ಈ ಸಿ.ಡಿ.ಗಳನ್ನು ಪಡೆಯಬೇಕಾದರೆ, ಕೇವಲ ಅಂಚೆ ವೆಚ್ಚ ಅಥವಾ ಕೊರಿಯರ್ ವೆಚ್ಚ ಭರಿಸಿದರೆ ಸಾಕು. ಹೆಚ್ಚಿನ ವಿವರಗಳಿಗೆ ಈ ವಿಳಾಸವನ್ನು ಸಂಪರ್ಕಿಸಿ: **ಶ್ರೀ ಪಾತಾಳಂ ಸುಬ್ಬಾರಾವ್, ಧರ್ಮಕರ್ತರು, ಶ್ರೀವೆಂಕಟೇಶ್ವರ ಸ್ವಾಮಿ ದೇವಸ್ಥಾನ, ದ್ರೋಣಾಚಲಂ – 518222, ಕರ್ನೂಲು ಜಿಲ್ಲೆ, ಆಂಧ್ರಪ್ರದೇಶ, ಫೋನ್: 08156–222051(ಆಫೀಸು), 290777 (ದೇವಸ್ಥಾನ), 9440290041**